1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.92/2020

ದಿಃ 11.10.2021
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Dw-1

| | | |
|---|---|---|
| ಹೆಸರು | ಃ | ಆನಂದಸ್ವಾಮಿ |
| ತಂದೆಯ ಹೆಸರು | ಃ | ಲೇ. ನಿಂಗೇಗೌಡ |
| ವಯಸ್ಸು | ಃ | 47 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಸಂತೆಮೊಗೇನಹಳ್ಳಿ, ಚನ್ನಪಟ್ಟಣ ತಾಲ್ಲೂಕು |

ಮುಖ್ಯ ವಿಚಾರಣೆಃ ಶ್ರೀ. ಬಿ.ಸಿ.ವಿ., ವಕೀಲರಿಂದಃ

2020ರಲ್ಲಿ ನಾನು ಸಂತೆಮೊಗೇನಹಳ್ಳಿ ಗ್ರಾಮದಿಂದ ಕೂಡ್ಲೂರು ಗ್ರಾಮ ಪಂಚಾಯ್ತಿಗೆ ಸದಸ್ಯನಾಗಿ ಆಯ್ಕೆಯಾಗಿದ್ದೆ. ನಮ್ಮ ಗ್ರಾಮದಿಂದಲೇ ಗುಂಡಪ್ಪನವರು ಸದಸ್ಯರಿದ್ದು ಪ್ರಸ್ತುತ ಅಧ್ಯಕ್ಷರಿರುತ್ತಾರೆ. ರೋಹಿತ್‌ರವರು ನಮ್ಮ ಪಕ್ಕದ ಊರಿನವರಿದ್ದು, ಅವರದ್ದು ನಮ್ಮ ಊರಿನಲ್ಲಿ ಜಮೀನು ಇದೆ.

2. ಈ ಪ್ರಕರಣದ ದೂರುದಾರರಾದ ರವಿಕುಮಾರ್ ನಮ್ಮ ಊರಿನಲ್ಲಿ ಜಮೀನು ಖರೀದಿಸಿರುತ್ತಾರೆ. ಈ ಪ್ರಕರಣದ ದೂರು ನೀಡುವ 1 ವರ್ಷದ ಮುನ್ನ ರವಿಕುಮಾರ್ ಸದರಿ ಜಮೀನು ಖರೀದಿ

ಮಾಡಿದ್ದರು. ರೋಹಿತ್ ಮತ್ತು ಚಾಸಾ.1ರವರ ಜಮೀನು ಒಂದೇ ಸರ್ವೆ ನಂಬರ್ ಇದ್ದು ಬೇರೆ ಬೇರೆ ಹಿಸ್ಸಾ ಇರುತ್ತದೆ.

3. 2ನೇ ಆರೋಪಿ ಬೆಂಗಳೂರಿನ ವಾಸು ಎನ್ನುವವರ ಜಮೀನನ್ನು ನೋಡಿಕೊಳ್ಳುತ್ತಾರೆ. ವಾಸುರವರ ಜಮೀನು ಮತ್ತು ಚಾಸಾ.1ರವರ ಜಮೀನು ಅಕ್ಕಪಕ್ಕವಿರುತ್ತದೆ. ಚಾಸಾ.1 ಮತ್ತು ಆತನ ಜೊತೆಯವರು ಅವರ ಜಮೀನಿನಲ್ಲಿ ಪ್ರಾರ್ಥನೆ ಮಾಡುವುದು, ತೀರ್ಥ ಕೊಟ್ಟು ಎಲ್ಲರೂ ಕುಣಿಯುವುದು, ಸಮಾರಂಭಗಳನ್ನು ಮಾಡುವುದು, ಪಾರ್ಟಿ ಮಾಡುವುದು ಮಾಡುತ್ತಿದ್ದರು. ಅವರು ನಮ್ಮ ಅಕ್ಕಪಕ್ಕದ ಊರಿನ ದಲಿತರನ್ನು ಕರೆದುಕೊಂಡು ಬಂದು ಮತಾಂತರ ಮಾಡುತ್ತಿದ್ದರು.

4. ಚಾಸಾ.1ರವರ ಜಮೀನಿನ ಪೂರ್ವಕ್ಕೆ 150 ಮೀಟರ್ ದೂರದಲ್ಲಿ ಮುಂಡಪ್ಪಸ್ವಾಮಿ ದೇವಸ್ಥಾನ, ಉತ್ತರಕ್ಕೆ 100 ಮೀಟರ್ ಅಂತರದಲ್ಲಿ ಏಳುಮಂದಮ್ಮ ದೇವಸ್ಥಾನ, ಅದೇ ದಿಕ್ಕಿಗೆ 200 ಮೀಟರ್ ದೂರದಲ್ಲಿ ಸರ್ಕಾರಿ ಶಾಲೆ ಮತ್ತು ಆಸ್ಪತ್ರೆ, ದಕ್ಷಿಣಕ್ಕೆ ಪುರಾತನ ಮಂಟಪಗಳು ಮತ್ತು ಕಲ್ಯಾಣಿಗಳು ಇರುತ್ತವೆ. ಅವುಗಳನ್ನು ತೋರಿಸಲು ಖಾಸಗಿ ಸಂಸ್ಥೆಯಿಂದ ನಕಾಶೆ ಒಂದನ್ನು ತಯಾರಿಸಿರುತ್ತೇವೆ ಸದರಿ ನಕಾಶೆಯನ್ನು ಸಾಕ್ಷಿಗೆ ತೋರಿಸಿ ಹಾಜರುಪಡಿಸಿದ್ದು ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು.

5. ಪೂರ್ವ ಮತ್ತು ಉತ್ತರಕ್ಕೆ ಹೊಂದಿಕೊಂಡಂತೆ ವಾಸದ ಮನೆಗಳೂ ಸಹ ಚಾಸಾ.1 ರವರ ಜಮೀನಿನ ಬಳಿ ಇವೆ. ಚಾಸಾ.1 ರವರ ಜಮೀನಿನಲ್ಲಿ ಈ ರೀತಿ ಮಾಡುತ್ತಿರುವುದನ್ನು 2 ನೇ ಆರೋಪಿ ಮತ್ತು ರೋಹಿತ್‌ರವರು ನನ್ನ ಬಳಿ ಬಂದು ನೀವು ಗ್ರಾಮ ಪಂಚಾಯ್ತಿ ಸದಸ್ಯರಿದ್ದೀರಿ, ಚಾಸಾ.1 ರವರನ್ನು ಬಂದು ಕೇಳುವಂತೆ ಹೇಳಿದರು. ಆಗ ನನ್ನ ಜೊತೆ ಗುಂಡಪ್ಪ ಸಹ ಇದ್ದರು. 2 ನೇ ಆರೋಪಿ ಮತ್ತು ರೋಹಿತ್‌ರವರು ಚಾಸಾ.1 ರವರನ್ನು ಈ ರೀತಿ ಮಾಡಬೇಡಿ ಎಂದು ಹೇಳಿದಾಗ ನಮ್ಮ ಜಮೀನು, ನಾವು ಏನು ಬೇಕಾದರೂ ಮಾಡುತ್ತೇವೆ ಎಂದು ಹೇಳಿರುತ್ತಾರೆ.

6. ಚಾಸಾ.1 ಮತ್ತು ಇತರರು ಈ ರೀತಿ ಕೃತ್ಯಗಳನ್ನು ಎಸಗುತ್ತಿದ್ದುದರಿಂದ ಧಾರ್ಮಿಕ ಕಲಹ ಉಂಟಾಗುತ್ತಿತ್ತು. ಆ ಕಾರಣಕ್ಕಾಗಿ ನಾನು, ಗುಂಡಪ್ಪ ಮತ್ತು ಇತರೆ 7-8 ಜನ ಚಾಸಾ.1 ರವರ ಜಮೀನಿನ ಬಳಿ ದೂರು ನೀಡುವ ಹಿಂದಿನ ದಿನ ಹೋಗಿ ನೋಡಿದಾಗ ಚಾಸಾ.1 ರವರ ಜೊತೆ ಸುಮಾರು 20 ಮಂದಿ ಅವರ ಜಮೀನಿನಲ್ಲಿ ಕುಣಿಯುತ್ತಿದ್ದರು. ನಾವು ಇದು ಕೃಷಿ ಜಮೀನು ಇದ್ದು, ಕೃಷಿ ಚಟುವಟಿಕೆಗಳನ್ನು ಮಾಡಿ ಎಂದು ಹೇಳಿದೆವು. ಚಾಸಾ.1 ನಾವು ಈ ಜಮೀನನ್ನು ಖರೀದಿಸಿದ್ದು, ಇಲ್ಲಿ ಚರ್ಚ್ ಕಟ್ಟುತ್ತೇವೆ ಮತ್ತು ಇಲ್ಲಿ ಏನು ಬೇಕಾದರು ಮಾಡುತ್ತೇವೆ ಎಂದು ಹೇಳಿದರು. ನಮಗೆ

ದೊಡ್ಡವರೆಲ್ಲಾ ಗೊತ್ತು, ನಮಗೆ ಚರ್ಚ್ ಕಟ್ಟುವುದು ಹೇಗೆ ಎಂದು ಗೊತ್ತು ಎಂದು ಧಮ್ಕಿ ಹಾಕಿದರು. ನಾವು ಸಂಬಂಧಪಟ್ಟವರಿಗೆ ದೂರು ನೀಡೋಣ ಎಂದು ಹಿಂದಿರುಗಿದೆವು. ನಂತರ ಚಾಸಾ.1ರವರೇ ದೂರು ನೀಡಿದ್ದು ತಿಳಿಯಿತು.

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ ಕಾಲಾವಕಾಶ ಕೋರಿದ್ದು ಅನುಮತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.